# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್–103, ಕಾವೇರಿಪುರ

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ದಿನಾಂಕ: 19.12.2020

1. ಸ್ವಾಗತ ಭಾಷಣ
2. ಶ್ರೀ.ಅಲೋಕ್ ಶೆಟ್ಟಿ ವಾರ್ಡ್ ನೋಡಲ್ ಅಧಿಕಾರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಮಾತನಾಡಿ ವಾರ್ಡ್ 103–ಕಾವೇರಿಪುರ ಪ್ರದೇಶದಲ್ಲಿ ನಾಗರೀಕರುಗಳಿಗೆ ಯಾವುದೇ ಸಮಸ್ಯೆಯಾಗದಂತೆ ಹಾಗೂ ಬರುವಂತಹ ದೂರುಗಳಿಗೆ ಕೂಡಲೇ ಸ್ಪಂದಿಸಿ, ಕೆಲಸ ಮಾಡಲು ವಾರ್ಡ್ ಸಮಿತಿಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ತಿಳಿಸಿದರು.
3. ದಿ॥ಶ್ರೀಮತಿ.ರಮೀಳಾ ಉಮಾಶಂಕರ್ ಹೆರಿಗೆ ಆಸ್ಪತ್ರೆ ಕಟ್ಟಡದಲ್ಲಿ ಜನರೇಟರ್ ಕೆಟ್ಟುಹೋಗಿರುವುದರಿಂದ ಸದರಿ ಆಸ್ಪತ್ರಗೆ ಬರುವ ರೋಗಿಗಳಿಗೆ ಚಿಕಿತ್ಸೆ ನೀಡಲು ಕಷ್ಟಕರವಾಗಿರುವುದರಿಂದ ಕೂಡಲೇ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್–ಪಶ್ಚಿಮ) ರವರು ಸದರಿ ಜನರೇಟರನ್ನು ಸರಿಪಡಿಸಲು ಕ್ರಮಕೈಗೊಳ್ಳಲು ಸೂಚಿಸಿದೆ.
4. ವಾರ್ಡ್–103 ಕಾವೇರಿಪುರ ಪ್ರದೇಶದಲ್ಲಿ ಬೀದಿ ದೀಪಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲವಾದ ಕಾರಣ ಸಭೆಯಲ್ಲಿ ಅನೇಕ ದೂರುಗಳು ಬರುತ್ತಿದ್ದು, ಕಳೆದ ನಾಲ್ಕು ಸಭೆಗಳಿಗೆ ವಿದ್ಯುತ್ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಅಥವಾ ಸಹಾಯಕ ಅಭಿಯಂತರರು ಅಥವಾ ಬೀದಿದೀಪ ನಿರ್ವಹಣೆಯ ಗುತ್ತಿಗೆದಾರರಾಗಲೀ ಸಭೆಗೆ ಹಾಜರಾಗಿರುವುದಿಲ್ಲ. ಮೌಖಿಕವಾಗಿ ಮತ್ತು ಪತ್ರದ ಮೂಲಕ ತಿಳಿಸಿದ್ದರೂ ಸಹ ಸಭೆಗೆ ಹಾಜರಾಗದ ಕಾರಣ ದಿನಾಂಕ: 02/01/2021ರ ಮಧ್ಯಾಹ್ನ 12.30ರಂದು ನಡೆಯಲಿರುವ ಮುಂದಿನ ವಾರ್ಡ್ ಕಮಿಟಿ ಸಭೆಗೆ ಸಂಬಂಧಪಟ್ಟ ಅಭಿಯಂತರರು ಮತ್ತು ಬೀದಿದೀಪ ನಿರ್ವಹಣೆಯ ಗುತ್ತಿಗೆದಾರರು ತಪ್ಪದೇ ಹಾಜರಾಗಲು ಸೂಚಿಸಿದರು.
5. ವಾರ್ಡ್–103 ಕಾವೇರಿಪುರ ಪ್ರದೇಶದಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗಕ್ಕೆ ಸಂಬಂಧಪಟ್ಟಂತೆ ಸ್ಯಾನಿಟೈಜೆಷನ್ ಕೆಲಸವನ್ನು ಶ್ರೀ.ಜಗದೀಶ್ (ಗುತ್ತಿಗೆದಾರರು) ರವರು ಕೆಲಸ ಮಾಡುತ್ತಿದ್ದಾರೆ ಎಂದು ಸಭೆಯಲ್ಲಿ ತಿಳಿಸಲಾಯಿತು.
6. ವಾರ್ಡ್–103 ಕಾವೇರಿಪುರ 4ನೇ ಮುಖ್ಯರಸ್ತೆ, 12ನೇ ಅಡ್ಡರಸ್ತೆಯಲ್ಲಿ ಬೀದಿ ದೀಪದ ಕಂಬವು ರಸ್ತೆಯ ಮಧ್ಯೆ ಇರುವುದರಿಂದ ಅದನ್ನು ಸ್ಥಳಾಂತರಿಸಲು ಬೆಸ್ಕಾಂ ಅಧಿಕಾರಿಯವರಿಗೆ ಅನೇಕ ಬಾರಿ ತಿಳಿಸಿದ್ದರೂ ಸಹ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಿರುವುದಿಲ್ಲವೆಂದು ತಿಳಿಸಿದರು. ಕೂಡಲೇ ಬೆಸ್ಕಾಂನ ಅಭಿಯಂತರರು ಸದರಿ ದೂರಿನ ಬಗ್ಗೆ ಪರಿಶೀಲಿಸಿ, ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದರು.
7. ಸದರಿ ವಾರ್ಡ್‌ನಲ್ಲಿರುವ ಬೋರ್‌ವೆಲ್‌ಗಳ ಬಗ್ಗೆ ಅನೇಕ ದೂರುಗಳು ಬರುತ್ತಿದ್ದು, ಸಂಬಂಧಪಟ್ಟ ಅಭಿಯಂತರರಾಗಲೀ ಅಥವಾ ಬೋರ್‌ವೆಲ್ ನಿರ್ವಹಣೆಯ ಗುತ್ತಿಗೆದಾರರಾಗಲೀ ಸಭೆಗೆ ಹಾಜರಾಗದೆ ಇರುವುದರಿಂದ ಸದರಿ ದೂರುಗಳ ಬಗ್ಗೆ ಚ್ಚರ್ಚಿಸಿ, ಕ್ರಮಕೈಗೊಳ್ಳಲು ಸಾಧ್ಯವಾಗದೆ ಇರುವ್ವದರಿಂದ ದಿನಾಂಕ: 02/01/2021ರ ಮಧ್ಯಾಹ್ನ 12.30ರಂದು ನಡೆಯಲಿರುವ ಮುಂದಿನ ವಾರ್ಡ್ ಕಮಿಟಿ ಸಭೆಗೆ ಸಂಬಂಧಪಟ್ಟ ಅಭಿಯಂತರರು ಮತ್ತು ಬೋರ್‌ವೆಲ್ ಗುತ್ತಿಗೆದಾರರು ತಪ್ಪದೇ ಹಾಜರಾಗಲು ಸೂಚಿಸಿದರು.

Scanned with CamScanner

8. ಮಾಗಡಿ ಮುಖ್ಯರಸ್ತೆ ಹೆಚ್.ವಿ.ಆರ್ ಬಡಾವಣೆಯಿಂದ ಸುಮನಹಳ್ಳಿ ಸೇತುವೆವರೆಗು ಬಿ.ಡಬ್ಲ್ಯೂ.ಎಸ್.ಎಸ್.ಬಿ ಯೋಜನೆಯವರು ರಸ್ತೆ ಕಾಮಗಾರಿ ಸಮಯದಲ್ಲಿ ತೆಗೆದಿರುವ ಮಣ್ಣಿನ ರಾಶಿಯನ್ನು ರಸ್ತೆಯಲ್ಲಿ ಬಿಟ್ಟಿರುವ್ಯದರಿಂದ ಪಾದಚಾರಿಗಳಿಗೆ ಮತ್ತು ರಸ್ತೆಯಲ್ಲಿ ವಾಹನಗಳಿಗೆ ಅಡಚಣೆಯಾಗುತ್ತಿರುವ್ಯದರಿಂದ ಕೂಡಲೇ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯಲ್ಲಿನ ಅಭಿಯಂತರರು ಮಣ್ಣಿನ ರಾಶಿಯನ್ನು ತೆಗೆಯಲು ಕ್ರಮಕೈಗೊಳ್ಳಲು ಸೂಚಿಸಿದೆ.

9. 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಪ್ರಶಾಂತನಗರ ಉಧ್ಯಾನವನಕ್ಕೆ ಬೀಗ ಹಾಕಿರುವ್ಯದರಿಂದ ಸಾರ್ವಜನಿಕರು ಭದ್ರತೆಯ ಕಂಬಿಯನ್ನು ಕಿತ್ತು ಒಳಗೆ ಹೋಗಿ ವಸ್ತುಗಳನ್ನು ಧ್ವಂಸ ಮಾಡುತ್ತಿರುವ್ಯದರಿಂದ ಅದಕ್ಕೆ ಒಬ್ಬ ಸೆಕ್ಯೂರಿಟಿ ನೇಮಕ ಮಾಡಲು ಸಭೆಯಲ್ಲಿ ಹಾಜರಿದ್ದು, ಸಾರ್ವಜನಿಕರು ತಿಳಿಸಿರುತ್ತಾರೆ. ಆದ್ದರಿಂದ ತೋಟಗಾರಿಕೆ ಅಧೀಕ್ಷಕರು ಸದರಿ ದೂರಿನ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಂಡು, ತೆಗೆದುಕೊಂಡಿರುವ ಕ್ರಮದ ಬಗ್ಗೆ ದಿನಾಂಕ: 02/01/2021ರ ಮಧ್ಯಾಹ್ನ 12.30ರಂದು ನಡೆಯಲಿರುವ ಮುಂದಿನ ವಾರ್ಡ್ ಕಮಿಟಿ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ತಪ್ಪದೇ ಹಾಜರಾಗಲು ಸೂಚಿಸಿದೆ.

10. ಪಟ್ಟೇಗಾರಪಾಳ್ಯ ಸೆಂಟ್ ಪೌಲ್ಸ್ ಶಾಲೆ ಹತ್ತಿರ ಇರುವ ಕೋಳಿ ಅಂಗಡಿಯವರು ಮತ್ತು ಸಾರ್ವಜನಿಕರು ಕಸ ಹಾಕುತ್ತಿರುವ ಬಗ್ಗೆ ಸಾರ್ವಜನಿಕರು ಸಭೆಯಲ್ಲಿ ತಿಳಿಸಿರುವ್ಯದರಿಂದ ಕೂಡಲೇ ಸಹಾಯಕ ನಿರ್ದೇಶಕರು ಪಶು ಸಂಗೋಪನೆ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ರವರು ಕೂಡಲೇ ಪರಿಶೀಲಿಸಿ ಅಗತ್ಯಕ್ರಮ ಕೈಗೊಂಡು ತೆಗೆದುಕೊಂಡಿರುವ ಕ್ರಮದ ಬಗ್ಗೆ ದಿನಾಂಕ: 02/01/2021ರ ಮಧ್ಯಾಹ್ನ 12.30ರಂದು ನಡೆಯಲಿರುವ ಮುಂದಿನ ವಾರ್ಡ್ ಕಮಿಟಿ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ತಪ್ಪದೇ ಹಾಜರಾಗಲು ಸೂಚಿಸಿದೆ.

11. ಸದರಿ ವಾರ್ಡ್‌ನ ಪ್ರದೇಶದಲ್ಲಿರುವ ರಸ್ತೆಬದಿಯಲ್ಲಿರುವ ಮರಗಳ ಬಗ್ಗೆ ಅನೇಕ ದೂರುಗಳು ಬರುತ್ತಿದ್ದು, ಅರಣ್ಯ ಇಲಾಖೆಯಿಂದ ಸದರಿ ಸಭೆಗೆ ಯಾರು ಹಾಜರಾಗದೆ ಇರುವ್ಯದರಿಂದ ದಿನಾಂಕ: 02/01/2021ರ ಮಧ್ಯಾಹ್ನ 12.30ರಂದು ನಡೆಯಲಿರುವ ಮುಂದಿನ ವಾರ್ಡ್ ಕಮಿಟಿ ಸಭೆಗೆ ಶ್ರೀ.ಶಿವರಾಮ್ (ಎ.ಇ) ಅರಣ್ಯ ಅಧಿಕಾರಿ ರವರು ತಪ್ಪದೇ ಹಾಜರಾಗಲು ಸೂಚಿಸಿದೆ.

12. ಕಾವೇರಿಪುರ ವಾರ್ಡ್ ಪ್ರದೇಶದಲ್ಲಿನ ಮನೆಗಳಲ್ಲಿ ಘನತ್ಯಾಜ್ಯವನ್ನು ವಿಂಗಡಿಸಲು ಕಸದ ಬುಟ್ಟಿಯನ್ನು ಮನೆ ಮನೆಗಳಿಗೆ ವಿತರಣೆಯಾಗಿರುವ ಬಗ್ಗೆ ಮಾಹಿತಿಯನ್ನು ಹಾಜರಿದ್ದ ಸಾರ್ವಜನಿಕರು ತಿಳಿಸಲು ಕೋರಿದರು. ಹಾಗೂ ಈ ವಾರ್ಡ್‌ನಲ್ಲಿನ ಮನೆಗಳಿಗೆ ಕಸದ ಬುಟ್ಟಿಗಳನ್ನು ವಿತರಣೆ ಮಾಡಲು ಟೆಂಡರ್ ಕರೆದಿದ್ದು, ಈ ಬಗ್ಗೆ ಇದುವರೆವಿಗೂ ಎಷ್ಟು? ಕಸದ ಬುಟ್ಟಿಗಳನ್ನು ಟೆಂಡರ್ ಗುತ್ತಿಗೆದಾರರು ಸರಬರಾಜು ಮಾಡಿರುತ್ತಾರೆ ಎಂದು ವಾರ್ಡ್‌ನ ಸಹಾಯಕ ಅಭಿಯಂತರರು ಮಾಹಿತಿಯನ್ನು ನೀಡಲು ಹಾಗೂ ಮನೆಮನೆಗಳಿಗೆ ಎಷ್ಟು ಕಸದ ಬುಟ್ಟಿಗಳನ್ನು ವಿತರಿಸಲಾಗಿದೆ ಎಂಬ ಮಾಹಿತಿಯನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ರವರು ದಿನಾಂಕ: 02/01/2021ರ ಮಧ್ಯಾಹ್ನ 12.30ರಂದು ನಡೆಯಲಿರುವ ಮುಂದಿನ ವಾರ್ಡ್ ಕಮಿಟಿ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ತಪ್ಪದೇ ಹಾಜರಾಗಿ ಮಾಹಿತಿಯನ್ನು ನೀಡಲು ಸೂಚಿಸಿದೆ.

13. ಕಾವೇರಿಪುರ 3ನೇ ಮುಖ್ಯರಸ್ತೆ ಆಲದ ಮರದ ಹತ್ತಿರ ಮತ್ತು ಸುತ್ತಾಮುತ್ತಾ ಪ್ರದೇಶದಲ್ಲಿ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವ ಹೆಣ್ಣುಮಕ್ಕಳು ಕೆಲಸ ಮುಗಿಸಿಕೊಂಡು ಸಂಜೆ ಸುಮಾರು 5.00 ಗಂಟೆಗೆ ಹೋಗುವ ಸಮಯದಲ್ಲಿ ಅಲ್ಲಿನ ಪೋಲಿಹುಡುಗರು ಗಾಂಜಾ ಸೇವಿಸಿ, ಹೋಗಿ ಬರುವ ಹೆಣ್ಣು ಮಕ್ಕಳಿಗೆ ಚುಡಾಯಿಸಿ ತೊಂದರೆ ನೀಡುತ್ತಿರುವ ಬಗ್ಗೆ ಸಂಬಂಧಪಟ್ಟ ಪೊಲೀಸ್ ಇಲಾಖೆಗೆ ತಿಳಿಸಿದ್ದರೂ ಸಹ ಪೊಲೀಸ್ ಇಲಾಖೆಯಿಂದ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ತಿಳಿಸಿರುತ್ತಾರೆ. ಸಂಬಂಧಪಟ್ಟ ಪೊಲೀಸ್ ಇಲಾಖೆಯ ಇನ್ಸ್‌ಪೆಕ್ಟರ್ ರವರು ಈ ಬಗ್ಗೆ ಪರಿಶೀಲಿಸಿ,

Scanned with CamScanner

ಕ್ರಮಕೈಗೊಂಡು ದಿನಾಂಕ: 02/01/2021ರ ಮಧ್ಯಾಹ್ನ 12.30ರಂದು ನಡೆಯಲಿರುವ ಮುಂದಿನ ವಾರ್ಡ್ ಕಮಿಟಿ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ತಪ್ಪದೇ ಹಾಜರಾಗಿ ಮಾಹಿತಿಯನ್ನು ನೀಡಲು ಸೂಚಿಸಿದೆ.

14. ಕಾವೇರಿಪುರ ವಾರ್ಡ್‌ನಲ್ಲಿನ ಮನೆಗಳಿಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯಿಂದ ನೀರನ್ನು ಸರಿಯಾಗಿ ಬಿಡುತ್ತಿಲ್ಲವೆಂದು ಮತ್ತು ನೀರು ಬಿಡುತ್ತಿರುವ ಸಮಯದಲ್ಲಿ ಅಲ್ಲಿನ ನಿವಾಸಿಗಳು ನೀರನ್ನು ಶೇಖರಿಸಲು ಸಾಧ್ಯವಾಗದೆ ಇರುತ್ತದೆ ಎಂದು ಸಾರ್ವಜನಿಕರು ದೂರನ್ನು ನೀಡುತ್ತಾ, ನಿವಾಸಿಗಳು ನೀರನ್ನು ಶೇಖರಿಸಲು ಅನುಕೂಲವಾಗುವಂತೆ ಪ್ರತಿದಿನ ಸಂಜೆ 5.00 ರಿಂದ ರಾತ್ರಿ ಸುಮಾರು 1.00 ಗಂಟೆಯವರೆಗೆ ನೀರನ್ನು ಬಿಡಲು ಕೋರಿರುತ್ತಾರೆ. ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಈ ದೂರಿನ ಬಗ್ಗೆ ಪರಿಶೀಲಿಸಿ, ಅಗತ್ಯ ಕ್ರಮಕೈಗೊಂಡು ದಿನಾಂಕ: 02/01/2021ರ ಮಧ್ಯಾಹ್ನ 12.30ರಂದು ನಡೆಯಲಿರುವ ಮುಂದಿನ ವಾರ್ಡ್ ಕಮಿಟಿ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ತಪ್ಪದೇ ಹಾಜರಾಗಿ ಮಾಹಿತಿಯನ್ನು ನೀಡಲು ಸೂಚಿಸಿದೆ.

15. ವಾರ್ಡ್–103 ಕಾವೇರಿಪುರ ಪ್ರದೇಶದಲ್ಲಿ ಅಳವಡಿಸಿರುವ ಸಿ.ಸಿ.ಕ್ಯಾಮರಗಳು ಕಾರ್ಯನಿರ್ವಹಿಸದೆ ಇರುವುದರಿಂದ ವಾರ್ಡ್ ಪ್ರದೇಶದಲ್ಲಿ ಉಲ್ಲಂಘನೆ ಮಾಡುವ ಪ್ರಕರಣಗಳ ಬಗ್ಗೆ ನಿಗಾ ಇಡಲು ಮತ್ತು ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಕ್ರಮಕೈಗೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸುತ್ತಾ, ಕೂಡಲೇ ಸದರಿ ಅಳವಡಿಸಿರುವ ಸಿಸಿ ಕ್ಯಾಮರಗಳನ್ನು ದುರಸ್ಥಿ ಕಾರ್ಯಗಳನ್ನು ಮಾಡಲು ಹಾಜರಿದ್ದ ಸಾರ್ವಜನಿಕರು ಮನವಿ ಸಲ್ಲಿಸಿರುತ್ತಾರೆ. ಸದರಿ ವಾರ್ಡ್‌ನ ಸಹಾಯಕ ಅಭಿಯಂತರರು ಕೂಡಲೇ ಪರಿಶೀಲಿಸಿ, ಅಗತ್ಯ ಕ್ರಮಕೈಗೊಂಡು ದಿನಾಂಕ: 02/01/2021ರ ಮಧ್ಯಾಹ್ನ 12.30ರಂದು ನಡೆಯಲಿರುವ ಮುಂದಿನ ವಾರ್ಡ್ ಕಮಿಟಿ ಸಭೆಯಲ್ಲಿ ಮಾಹಿತಿಯನ್ನು ನೀಡಲು ಸೂಚಿಸಿದೆ.

16. ರಂಗನಾಥಪುರ 6ನೇ ಮುಖ್ಯರಸ್ತೆಯಲ್ಲಿ ನಿರ್ಮಿಸಿರುವ ಅನಧಿಕೃತ ಶೆಡ್‌ಗಳನ್ನು ತೆರವುಗೊಳಿಸಲು ಸಭೆಗೆ ಹಾಜರಿದ್ದ ಸಾರ್ವಜನಿಕರು ಮನವಿಯನ್ನು ಸಲ್ಲಿಸಿರುತ್ತಾರೆ. ಈ ವಿಷಯದ ಬಗ್ಗೆ ಪರಿಶೀಲಿಸಿ, ಅಗತ್ಯ ಕ್ರಮಕೈಗೊಳ್ಳಲು ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸುತ್ತಾ, ಮುಂದಿನ ಸಭೆಗೆ ಮಾಹಿತಿಯನ್ನು ನೀಡಲು ಸೂಚಿಸಿದೆ.

17. ಮಾನ್ಯ ಆಯುಕ್ತರು ರವರ ಆದೇಶದಲ್ಲಿ ವಾರ್ಡ್‌ನ ಸಹಾಯಕ / ಕಿರಿಯ ಅಭಿಯಂತರರು ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲು ಸೂಚಿಸಿರುವುದರಿಂದ 103–ಕಾವೇರಿಪುರ ವಾರ್ಡ್‌ನಲ್ಲಿ ನಡೆಯುವ ಮುಂದಿನ ಎಲ್ಲಾ ಸಭೆಗಳಲ್ಲಿ ಸದಸ್ಯ ಕಾರ್ಯದರ್ಶಿಯಾಗಿ ಶ್ರೀ.ವಿಜಯಕುಮಾರ್, ಸಹಾಯಕ ಅಭಿಯಂತರರು ರವರು ಕಾರ್ಯನಿರ್ವಹಿಸಲು ಸೂಚಿಸಲಾಗಿದೆ.

ಶ್ರೀ ರೇಣುಕಾಪ್ರಸಾದ್. ಸಿ
ಕಾರ್ಯದರ್ಶಿ

(ಶ್ರೀ ಆಲೋಕ್ ಶೆಟ್ಟಿ)
ವಾರ್ಡ್ ನೋಡಲ್ ಅಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with CamScanner